# ವಿಧ್ವಂಸಕರ ಕಂಪನಿ!











■ ಸುಯಾ

ತಲೆ ಕೆಟ್ಟು ಹೋಗಿದೆಯೇ? ದಿನವಿಡೀ ತಲೆಯಲ್ಲಿ ಹಾಳು ವಿಚಾರಗಳೇ ಬರುತ್ತಿವೆಯೇ? ಸಿಕ್ಕಾಪಟ್ಟೆ ಸಿಟ್ಟು ಬಂದಿದೆಯೆ?

ಹಾಗಾದರೆ ನಿಮಗೆಲ್ಲ 'ವಿಧ್ವಂಸಕರ ಸಂಘ'ಕ್ಕೆ ಸ್ವಾಗತ!

ಇಲ್ಲಿ ಬನ್ನಿ. ನಿಮ್ಮ ಕೈಗೆ ದೊಡ್ಡದೊಂದು ಬಡಿಗೆ ಕೊಡುತ್ತೇವೆ. ಅಥವಾ ಕೊಡಲಿ, ಸುತ್ತಿಗೆ, ತಲವಾರ್!– ನಿಮಗೇನು ಬೇಕೋ ಅದನ್ನು ಕೈಗೆತ್ತಿಕೊಳ್ಳಿ; ಎದುರಿಗೆ ಇರುವ ವಸ್ತುಗಳ ಮೇಲೆ ಹೊಡೆದು ಪುಡಿ ಪುಡಿ ಮಾಡಿ. ನಿಮಗೆ ಇಷ್ಟ ಬಂದಷ್ಟು ಹೊತ್ತು; ಇಷ್ಟ ಬಂದಂತೆ ಬಡಿಯಿರಿ. ಬಡಿದೂ ಬಡಿದೂ ನಿಮ್ಮ ಮನಸ್ಸು ಶಾಂತವಾದ ಬಳಿಕ ಹೊರಬನ್ನಿ!

ಆಫೀಸಿನಲ್ಲಿ ಬಾಸ್ ದಿನವೂ ಕಿರಿಕಿರಿ ಕೊಡುತ್ತಾನೆಯೇ? ಮನೆಯಲ್ಲಿ ಹೆಂಡತಿ ಅಸಾಧ್ಯ ಕಿರಿಕಿರಿ ಮಾಡುತ್ತಿದ್ದಾಳಾ? ಬಾಸ್ ಮೇಲೆ, ಹೆಂಡತಿ ಮೇಲೆ ಕೈಮಾಡಲು ಸಾಧ್ಯವಿಲ್ಲವೆ? ಕಾರಣಗಳು ಏನೇ ಇರಲಿ– ಅದನ್ನು ಇಲ್ಲಿ ಕೇಳುವುದಿಲ್ಲ. ಒಟ್ಟಾರೆ ನಿಮ್ಮ ಅಸಾಧ್ಯ ಸಿಟ್ಟು ಶಮನಗೊಳ್ಳಬೇಕು. ಅದಾಗಬೇಕಿದ್ದರೆ ನೀವು ಚಚ್ಚಲೇಬೇಕು. ಅದಕ್ಕಾಗಿಯೇ ಈ ಸಂಘವಿದೆ. ನಿಮ್ಮ ಮನಸ್ಸಿನ ಸಮಾಧಾನವೇ ನಮ್ಮ ಉದ್ದೇಶ! ಈ ಕಂಪೆನಿಯ ಹೆಸರೇ ಡಿಸ್ಟ್ರಕ್ಷನ್ ಕಂಪೆನಿ! ಎದುರಿಗಿರುವ ವಸ್ತುಗಳೆಲ್ಲ ನಾಶವಾದ ಮೇಲೆ ನಿಮ್ಮ ಸಿಟ್ಟೂ ನಾಶವಾಗುತ್ತದೆ. ಇದೊಂದು ತರಹದ ಮಾನಸಿಕ ಚಿಕಿತ್ಸೆ!

ಈ ಕಂಪೆನಿ ಅಮೆರಿಕದ ನ್ಯೂಜರ್ಸಿಯಲ್ಲಿದೆ. ಈ ಕಂಪನಿಯ ಸದಸ್ಯರಾಗುವುದು ಅಷ್ಟು ಸುಲಭವಲ್ಲ. ನೀವೇ ಹೋದರೆ ಸದಸ್ಯತ್ವ ಸಿಗುವುದಿಲ್ಲ. ಈಗಾಗಲೆ ಕಂಪನಿಯ ಸದಸ್ಯರಾದವರು ನಿಮ್ಮನ್ನು ಸದಸ್ಯರಾಗಲು ಆಹ್ವಾನಿಸಬೇಕು. ಆಮೇಲೆ ಆ ಕಂಪನಿಯ ನಿಯಮಗಳನ್ನು ಓದಿ, ಅವುಗಳಿಗೆ ನಾನು ಬದ್ಧನಾಗಿರುವೆ ಎಂದು ಪ್ರಮಾಣ ಮಾಡಬೇಕು. ಎಲ್ಲವನ್ನೂ ಪರಿಶೀಲಿಸಿದ ಮೇಲೆ, ನೀವು ಸೂಕ್ತ ವ್ಯಕ್ತಿ ಎಂದು ದೃಢಪಟ್ಟರೆ, ವಾರ್ಷಿಕ ಶುಲ್ಕ ತುಂಬಿ ಸದಸ್ಯರಾಗಲು ನಿಮಗೆ ಅನುಮತಿ ಸಿಗುತ್ತದೆ. ಸದಸ್ಯರಾದ ಮೇಲೆಯೂ ಷರತ್ತುಗಳಿವೆ– ಅಲ್ಲಿ ನೀವು ಸ್ಫೋಟಕ ವಸ್ತುಗಳನ್ನು ಬಳಸುವಂತಿಲ್ಲ. ಕಾಗದ ಪತ್ರಗಳನ್ನು ಹಾಳು ಮಾಡುವಂತಿಲ್ಲ. ಜೀವಂತ ವ್ಯಕ್ತಿಗಳಿಗೆ ಹೊಡೆಯುವಂತಿಲ್ಲ. ಗುಂಡು ಹಾಕಿ ಅಥವಾ ಮಾದಕ ವಸ್ತುಗಳನ್ನು ಸೇವಿಸಿ ಅಲ್ಲಿ ಪ್ರವೇಶಿಸುವಂತಿಲ್ಲ.

ನೀವು ಧ್ವಂಸ ಮಾಡಬಹುದಾದ ವಸ್ತುಗಳ ಪಟ್ಟಿಯೇ ಇದೆ. ಅವುಗಳಲ್ಲಿ ಪೀಠೋಪಕರಣಗಳು, ದೂರದರ್ಶನ, ಗಿಟಾರ್, ಫ್ಯಾಕ್ಸ್ ಮೆಶಿನ್, ಲ್ಯಾಪ್‌ಟಾಪ್, ಮೋಟಾರ್ ಸೈಕಲ್, ಕಲಾತ್ಮಕ ಜಾರುಗಳು, ಕಂಪ್ಯೂಟರ್ ಇತ್ಯಾದಿಗಳಿವೆ. ಇವುಗಳನ್ನು ಹಾಳು ಮಾಡಲು ಉಪಯೋಗಿಸುವ ಆಯುಧಗಳ ಪಟ್ಟಿಯೂ ಅಲ್ಲಿದೆ. ಅವುಗಳಲ್ಲಿ ಬೇಸ್‌ಬಾಲ್ ಬ್ಯಾಟ್, ಖಡ್ಗ, ಕೊಡಲಿ, ವಿವಿಧ ಬಗೆಯ ಸುತ್ತಿಗೆಗಳು, ಗರಗಸ, ಬಡಿಗೆ ಮುಂತಾದವು ಸೇರಿವೆ. ನೀವು ಧ್ವಂಸ ಮಾಡಲು ಬಯಸುವ ವಸ್ತುಗಳು ಅಲ್ಲಿರದಿದ್ದರೆ, ಅವುಗಳನ್ನು ಖರೀದಿಸಿ ತಂದು ನಿಮಗೆ ಪೂರೈಸುವ ವ್ಯವಸ್ಥೆಯೂ ಇದೆ! ಹೊಡೆಯಲು ಬೇರೆ ಆಯುಧಗಳು ಬೇಕೆಂದರೆ ಅದನ್ನೂ ಅವರೇ ಒದಗಿಸುತ್ತಾರೆ. 'ಬಿಲ್ ಪೇ' ಮಾಡಿದರೆ ಸಾಕು! ಹತ್ತು ಡಾಲರ್ ಬೆಲೆಯ ಪ್ಲೇಟ್‌ಸೆಟ್‌ನಿಂದ ಹಿಡಿದು, ಒಂದು ಲಕ್ಷ ಡಾಲರ್ ಬೆಲೆಯ ಕಾರಿನವರೆಗೆ ಎಲ್ಲವೂ ಅಲ್ಲಿ ಒಡೆದುಹಾಕಲು ಸಿಗುತ್ತವೆ!

ನ್ಯೂಜರ್ಸಿಯಲ್ಲಿ ಆರಂಭವಾಗಿರುವ ಈ ಸಂಘದ ಸದಸ್ಯತ್ವ ಪಡೆಯಲು ಈಗಲೇ ನೂಕುನುಗ್ಗಲು ಇದೆಯಂತೆ. ಸದಸ್ಯರಾದವರೆಲ್ಲ ಶ್ರೀಮಂತರೇ. ಅದರಲ್ಲೂ ಶೇಕಡಾ 40ರಷ್ಟು ಮಹಿಳೆಯರು! ಇಲ್ಲಿ ಒಬ್ಬರೇ ಬಂದು ಧ್ವಂಸ ಕಾರ್ಯ ಮಾಡಬಹುದು; ಗುಂಪಾಗಿ ಬಂದು ಚಚ್ಚಲೂಬಹುದು. ಹಾಗೆಯೇ ನಿಮ್ಮ ವಿಧ್ವಂಸಕ ಕೃತ್ಯಗಳ ಚಿತ್ರೀಕರಣವನ್ನೂ ಮಾಡಬಹುದು! ನಿಯಂತ್ರಣ ಕೊಠಡಿಯಲ್ಲಿ ಆ ವೀಡಿಯೊ ನೋಡುತ್ತಾ ಖುಷಿ ಪಡಬಹುದು! ಸಂಘದ ವಕ್ತಾರರ ಪ್ರಕಾರ, 'ಈ ವಸ್ತುಗಳ ನಾಶ ಹಿಂಸೆ ಅಲ್ಲ. ಅದೊಂದು ಹಾಳು ಮಾಡುವ ಅದ್ಭುತ ಕಲೆ!'

ನ್ಯೂಜರ್ಸಿಯಲ್ಲಿ ಮಾತ್ರ ಇರುವ ಈ ಸಂಘದ ಶಾಖೆಗಳನ್ನು ಲಾಸ್ ಏಂಜಲೀಸ್ ಮತ್ತು ಲಂಡನ್ನಿನಲ್ಲೂ ತೆರೆಯುವ ಆಲೋಚನೆ ಇದೆಯಂತೆ. ಆದರೆ ಲಂಡನ್ನಿನಲ್ಲಿ ಪೋಲಿ ಪೋಕರಿಗಳೆಲ್ಲ ಸೇರಿ ಅದಾಗಲೇ ವಾರವಿಡೀ ಊರ ತುಂಬಾ ವಿಧ್ವಂಸಕ ಕೃತ್ಯಗಳನ್ನು ಮಾಡಿದ್ದಾರೆ! ಹಾಗಾಗಿ ಸದ್ಯ ಈ ಸಂಘದ ಶಾಖೆ ತೆರೆಯುವ ಅಗತ್ಯ ಇರಲಿಕ್ಕಿಲ್ಲ, ಅಲ್ವೆ?